ಮತ್ತೆ ದುಡ್ಡನ್ನು ಬೇಡುವರು. ಕಾಂಟ್ರಕ್ಟರರು ಮೊದಲು ಕೆಲಸವನ್ನು ಮಾಡಿಕೊಡಬೇಕು. ಲೆಕ್ಕವನ್ನು ಸರಿಯಾಗಿ ತೋರಿಸಬೇಕು. ಬಳಿಕ ಹಣವನ್ನು ಬೇಡಬೇಕು. ಕೇಶವರಾಯರು ಹಾಗೆ ಮಾಡಲಿಲ್ಲ.

ಇಂದು ತಡಕೋಡಕ್ಕೆ ಶ್ರೀ ಚಿದಂಬರ ದೀಕ್ಷಿತರ ಪುಣ್ಯದಿನೋತ್ಸವಕ್ಕೆ ಆಮಂತ್ರಿತನಾಗಿ ಹೋಗಿದ್ದೆನು.

**22-12-41 ರಾತ್ರಿ9.35**

ಇಂದು ಕನ್ನಡಿಗರ ಕೂಟ, ಧಾರವಾಡ ಅಮೆಚ್ಯೂರ್ಸ ಮತ್ತು ಶಾಂತೇಶ ವಾಚನಾಲಯ ಈ ಮೂರು ಸಂಸ್ಥೆಗಳು ನನಗೋಸುಗ ಸಂತೋಷಕೂಟವನ್ನು ಏರ್ಪಡಿಸಿದ್ದುವು. ಶ್ರೀಮಾನ್ ಆಲೂರ ವೆಂಕಟರಾಯರು ಅಧ್ಯಕ್ಷರಾಗಿದ್ದರು. ಶ್ರೀ. ಮುದವೀಡು ಕೃಷ್ಣರಾಯರು, ಬೆಟಗೇರಿ ಕೃಷ್ಣಶರ್ಮರು ಮತ್ತು ಜಹಾಗೀರದಾರರು ಮಾತನಾಡಿದರು. ಎಲ್ಲರ ಉಪಕಾರವನ್ನು ಸ್ಮರಿಸಿದೆನು. ಉಪಕಾರವಾಯ್ತು.

'ಬಸವರಾಜ' ಎಂಬುದೊಂದು ಲಿಂಗಾಯತ ವೃತ್ತಪತ್ರಿಕೆ. ಬಹುಶಃ ಎಲ್ಲ ಬ್ರಾಹ್ಮಣ ವಿದ್ವಜ್ಜನರಿಗೆ ಬಾಯಿಗೆ ಬಂದಂತೆ ಬಯ್ದಿದೆ. ಜಾತಿದ್ವೇಷದ ಬೀಜಗಳನ್ನು ಸ್ವೈರವಾಗಿ ತೂರಿದೆ. ಹೀಗೆ ವಿಷದ ಬೀಜಗಳನ್ನು ತೂರಿದರೆ ನಾಡಿಗೆ ಅಹಿತವು ತಪ್ಪದು. ಜಾತ್ಯಂಧತೆ ಯಾರಿಗೂ ಕ್ಷೇಮ ಮಾಡಿಲ್ಲ. ಈ ಲಿಂಗಾಯತರಿಗೆ ಈ ಮಾತು ತಿಳಿಯಬೇಕೆಂದು? ಒಂದು ಜಾತಿಯನ್ನು ನಿರ್ಮೂಲಗೊಳಿಸಲು ಯತ್ನ ಮಾಡುವುದರಿಂದ ಪ್ರತ್ಯಾಘಾತವು ತಮ್ಮ ಮೇಲೆ ಆಗದೇ ಇರದೆಂಬ ಅರಿವು ಈ ಜಾತ್ಯಂಧರಿಗೆ ಹುಟ್ಟುವುದೆಂದು? ದೇವಾ! ನನ್ನ ಕನ್ನಡ ನಾಡು ಯಾರ ಶಾಪಕ್ಕೆ ಗುರಿಯಾಗಿದೆ? ಶಾಪವಿತ್ತ ಋಷಿವರನೇ, ಅಪರಾಧವನ್ನು ಮನ್ನಿಸು; ನನ್ನ ನಾಡು ಕಷ್ಟಕ್ಕೆ ಗುರಿಯಾಗಿ ಬಳುಲುತ್ತಿದ್ದುದು ನಿನಗೆ ಕಾಣಿಸದೆ? ದಯೆದೋರು, ನನ್ನ ನಾಡು ಬದುಕಿ ಬಾಳುವಂತೆ ಮಾಡು!

**6-1-42 ರಾತ್ರಿ 9.5**

ಡಿಸೆಂಬರ 25ನೆಯ ತಾರೀಖಿನ ದಿವಸ ಹೈದರಾಬಾದಿಗೆ ಹೊರಟೆನು. ಕಲಬುರ್ಗಿಯಲ್ಲಿ ಎರಡು ದಿನವಿದ್ದು ಹೈದರಾಬಾದಿಗೆ ಹೋದೆನು. ಸಾಹಿತ್ಯ ಸಮ್ಮೇಲನದ ಮಹೋತ್ಸವವು ಪ್ರಾರಂಭವಾಯ್ತು. ಕೊನೆಯ ದಿವಸ ಕವಿಗೋಷ್ಠಿ. ಎಲ್ಲವೂ ವಿಜೃಂಭಣೆಯಿಂದ ನೆರವೇರಿತು.

ಇಲ್ಲಿಗೆ ನಾಲ್ಕನೆಯ ತಾರೀಖಿನ ದಿವಸ ತಿರುಗಿ ಬಂದೆನು. ಪ್ರಕೃತಿ ಸರಿಯಾಗಿರಲಿಲ್ಲ.

ಇಂದು ಪಾಂಡುರಂಗರಾಯರು ಮದ್ರಾಸಕ್ಕೆ ಹೋದರು.

ಶ್ರೀ ರುಕ್ಮಾಂಗದರಾಯರಿಂದ ಪತ್ರವು ಇಂದು ಬಂದಿತು. 500ರೂ.ಗಳ ಚೆಕ್ಕನ್ನು ಕಳಿಸಿರುವರು. ಶ್ರೀಹರಿ ಅವರಿಗೂ ಅವರ ಕುಟುಂಬದವರಿಗೂ ಕಲ್ಯಾಣ ಮಾಡಲಿ. ಅನುಪಮವಾದ ಮಿತ್ರತ್ವವಿದು! ಶ್ರೀಹರಿ, ಇದೇ ಬಗೆಯ ನಿಃಸ್ವಾರ್ಥವಾದ ಪ್ರೇಮವು ಜಗತ್ತಿನಲ್ಲಿ ಎಲ್ಲೆಡೆಯಲ್ಲಿಯೂ ನೆಲೆಗೊಳ್ಳುವುದೆಂದು?

**7-1-42 ರಾತ್ರಿ 9.25**

ಗೋತೆ ಕೇಶವರಾಯರು ನನ್ನ ಮನೆಯ ಕೆಲಸದಲ್ಲಿ ಆಸ್ಥೆಯನ್ನು ಸಾಕಷ್ಟು ವಹಿಸಿಲ್ಲ. ಮತ್ತೆ ಕೆಲಸವು ನಿಂತಿದೆ. ಅವರ ಯೋಗ್ಯತೆಯನ್ನು ಸರಿಯಾಗಿ ಅರಿಯದೆ ಎಲ್ಲ ಬಗೆಯಿಂದಲೂ ಅವರು ಸಮರ್ಥರಿರುವರೆಂದು ಬಗೆದು ಅವರಿಗೆ ಕೆಲಸವನ್ನು ಒಪ್ಪಿಸಿದೆ. ಸಂಪೂರ್ಣ ವಿಶ್ವಾಸವನ್ನು ಅವರಲ್ಲಿ ಇಟ್ಟು ಮುಂಗಡ ಹಣವನ್ನೂ ಕೊಟ್ಟೆನು. ನನ್ನ ನಂಬುಗೆಗೂ ವಿಶ್ವಾಸಕ್ಕೂ ಅನುಗುಣವಾಗಿ ಅವರು ನಡೆಯಲಿಲ್ಲ. ಎಷ್ಟು ಕಾಲವಾಯ್ತು! ಇಷ್ಟು ಸಮಯದಲ್ಲಿ ಎರಡು ಮನೆಗಳನ್ನು ಕಟ್ಟಿ ಮುಗಿಸಬಹುದಾಗಿತ್ತು. ಇನ್ನೂ ಅರ್ಧದಷ್ಟೂ ನನ್ನ ಮನೆಯಾಗಿಲ್ಲ. ನನಗೆ ತೊಂದರೆಯಾಗಬಾರದೆಂದು ಅವರಿಗೆ ಕೆಲಸವನ್ನು ಒಪ್ಪಿಸಿದೆನು. ಆದರೆ ಇಮ್ಮಡಿ ತೊಂದರೆ ಆಯ್ತು. ಶ್ರೀಹರಿಯ ಇಚ್ಛೆ!

ಬಾವಿಯ ಕೆಲಸವೂ ನಿಂತಿದೆ!

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ |**

**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ || 9.22**

ಎಂಬುದು ಭಗವಂತನ ಉಕ್ತಿ. ಈ ಉಕ್ತಿಯ ರಹಸ್ಯವು ಇಂದು ಪೂಜೆಗೆ ಕುಳಿತಾಗ ಹೊಳೆಯಿತು.